ಆ) ಕೈಗಾರಿಕಾ ಪ್ರದೇಶದ ಐ.ಟಿ. ಕಾರಿಡಾರ್ ಉದ್ದೇಶಕ್ಕೆ ಬೆಂಗಳೂರು ಪೂರ್ವ ತಾಲ್ಲೂಕು ಬೆಳ್ಳಂದೂರು ದೇವರಬೀಸನಹಳ್ಳಿ ಇತರೆ ಗ್ರಾಮಗಳಲ್ಲಿ 681–00 ಎಕರೆ ಜಮೀನು (ಈ ಪೈಕಿ 247 ಎಕರೆಗೆ ಅಂತಿಮ ಅಧಿಸೂಚನೆ ಪ್ರಕಟಿಸಲಾಗಿದೆ) ಹಾಗೂ ಎಲೆಕ್ಟ್ರಾನಿಕ್ ಸಿಟಿ 4ನೇ ಹಂತದ ಉದ್ದೇಶಕ್ಕೆ ವೀರಸಂದ್ರ ಮತ್ತು ಹೆಬ್ಬಗೋಡಿ 224–33 ಎಕರೆ ಜಮೀನು ಸ್ವಾಧೀನಪಡಿಸಲು ಉದ್ದೇಶಿಸಲಾಗಿದೆ.

ಇ) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಈ ಕೆಳಕಂಡ ಗ್ರಾಮಗಳಲ್ಲಿ ಪರಿಹಾರ ಪಾವತಿಸಲಾಗುತ್ತಿದೆ.

1. ಬೆಳ್ಳಂದೂರು (ಎಕರೆ ಒಂದಕ್ಕೆ) ರೂ. 25.00 ಲಕ್ಷ (ಕೃಷಿ)
   ರೂ. 26.00 ಲಕ್ಷ (ಕೃಷಿಯೇತರ)
2. ದೇವರಬೀಸನಹಳ್ಳಿ (ಎಕರೆ ಒಂದಕ್ಕೆ)
   ರೂ. 25.00 ಲಕ್ಷ (ಕೃಷಿ)
   ಊ. 26.00 ಲಕ್ಷ (ಕೃಷಿಯೇತರ)

ಈ) ಈ ಪ್ರದೇಶಗಳಲ್ಲಿ ಯಾವುದೇ ಕೆರೆಗಳು ಒಳಗೊಂಡಿರುವುದಿಲ್ಲ. ಈ ಪ್ರದೇಶಗಳು ಹಸಿರು ವಲಯದಲ್ಲಿ ಒಳಪಡುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕೋಳಿ ಹಾಗೂ ಕುರುಬರ ಸಮಾಜವನ್ನು ಎಸ್.ಟಿ. ಪಟ್ಟಿಗೆ ಸೇರಿಸುವುದು

263 (583): ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೋಳಿ ಸಮಾಜ ಹಾಗೂ ಕುರುಬರ ಸಮಾಜದವರ ಜನಸಂಖ್ಯೆ ಎಷ್ಟು;

ಆ) ಈ ಸಮಾಜಗಳನ್ನು ಎಸ್.ಟಿ.ಗೆ. ಸೇರಿಸುವ ಕುರಿತು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕೋಳಿ ಜಾತಿಯು ಬೆಸ್ತ ಜಾತಿಯ ಉಪಜಾತಿಯಾಗಿದ್ದು ಕೋಳಿ ಜಾತಿ ಸೇರಿದಂತೆ ಬೆಸ್ತ ಜನಾಂಗದ ಜನಸಂಖ್ಯೆ 1988 ರ ಶ್ರೀ ಒ. ಚಿನ್ನಪ್ಪರೆಡ್ಡಿ ಆಯೋಗದ ವರದಿಯಂತೆ ಅಂದಾಜು 11,20,423 ಜನಸಂಖ್ಯೆ ಇರುತ್ತದೆ.

1988 ಶ್ರೀ ಒ. ಚಿನ್ನಪ್ಪರೆಡ್ಡಿ ಆಯೋಗದ ವರದಿಯಂತೆ ಕುರುಬ ಜನಾಂಗದ ಅದಾಜು ಜನಸಂಖ್ಯೆ 27,66,671 ಇರುತ್ತದೆ.

ಈ ಜಾತಿಗಳ ಜನಸಂಖ್ಯೆಯ ಸಮೀಕ್ಷೆಯು ನಡೆಯದೇ ಇರುವುದರಿಂದ ಇವುಗಳ ಇತ್ತೀಚಿನ ಜನಸಂಖ್ಯೆಯ ಮಾಹಿತಿ ಲಭ್ಯವಿಲ್ಲ.

ಆ) ಗಂಗಾಮತ ಸಮಾಜದ ಉಪ ಜಾತಿಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಕಂಡು ಭಾರತ ಬಗ್ಗೆ ಸರ್ಕಾರಕ್ಕೆ ದಿನಾಂಕ: 25–7–2001ರಲ್ಲಿ ಕಳುಹಿಸಿದ ಪ್ರಸ್ತಾವನೆಯಲ್ಲಿ ಕೋಳಿ ಜಾತಿಯನ್ನು ಸೇರಿಸಲಾಗಿದೆ. ಕುರುಬ ಸಮಾಜ ಜನಾಂಗವನ್ನು ಪರಿಶಿಷ್ಟ ವರ್ಗದ ಪಟ್ಟಿಗೆ ಸೇರಿಸಲು ಪ್ರಸ್ತಾವನೆ ಬಂದಿರುವುದಿಲ್ಲ.